[Govt. of Karnataka C.R.P. 67]

| Deposition Sheets (RP.No.57) Form No.4 (Civil) | IN THE COURT OF CIVIL JUDGE & J.M.F.C., KARKALA. Criminal Case No. 2118/2023 ...................................................Vs.................................... |
|---|---|

ಸಾಕ್ಷಿದಾರನ ಹೆಸರು ಃ ಪ್ರಕಾಶ್ ಗುಡಿಗಾರ್ ಪಿ.ಡಬ್ಲ್ಯೂಃ 6

ತಂದೆಯ ಹೆಸರುಃ ದಿ. ವಾಸುದೇವ ಸಿ.ಡಬ್ಲ್ಯೂಃ 17

ಪ್ರಾಯ ಃ 54 ವರ್ಷ

ಉದ್ಯೋಗ ಃ ಹೆಚ್ ಸಿ ,ಶಿರ್ವ

ವಾಸ ಃ ಕೆರ್ವಾಶೆ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 21.08.2025

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು **2019** ರಿಂದ **2024** ಜುಲೈ ವರಗೆ ಕಾರ್ಕಳ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 07.08.2023 ಸಂಜೆ 8.00 ಗಂಟೆಯಿಂದ ದಿಃ08.08.2023 ಬೆಳಿಗ್ಗ 8.00 ಗಂಟೆಯವರೆಗೆ ಕರ್ತವ್ಯದಲ್ಲಿದ್ದೆ. ರಾತ್ರಿ 12.15 ಗಂಟೆಗೆ ಕೆಎಂಸಿ ಮಣಿಪಾಲ್ ನಿಂದ ಮಣಿಪಾಲ್ ಪೊಲೀಸ್ ಠಾಣೆಗೆ ಮಂಜುನಾಥ್ ಶೆಟ್ಟಿ ಎಂಬುವವರು ಆಸ್ಪತ್ರೆಗೆ ಕರೆ ತಂದಾಗ ಮೃತಪಟ್ಟಿರುವ ಬಗ್ಗೆ ಮಾಹಿತಿಯನ್ನು ನೀಡಿದ್ದು ಸದ್ರಿ ಮಾಹಿತಿಯನ್ನು ಮಣಿಪಾಲ್ ಠಾಣೆಯವರು ಇ-ಮೇಲ್ ಮುಖಾಂತರ ನಮ್ಮ ಠಾಣೆಗೆ ಕಳುಹಿಸಿರುತ್ತಾರೆ. ಸದ್ರಿ ಮಾಹಿತಿಯನ್ನು ನಾನು ಸ್ವೀಕರಿಸಿಕೊಂಡಿರುತ್ತೇನೆ. ಚಾಸಾ-1 ರವರು ರಾತ್ರಿ 1.30 ಗಂಟೆಗೆ ಠಾಣೆಗೆ ಬಂದು ನಿಪಿ-1 ದೂರು ನೀಡಿರುತ್ತಾರೆ. ಅದನ್ನು ನಾನು ಸ್ವೀಕರಿಸಿ ಅಕ್ರ ನಂ. 105/2023 ಕಲಂ 279, 337, 304 ಎ ಐಪಿಸಿ ರಡಿಯಲ್ಲಿ ಪ್ರ ವ ವರದಿಯನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಮಾಹಿತಿಯನ್ನು ಮೇಲಾಧಿಕಾರಿಯವರಿಗೆ ನೀಡಿರುತ್ತೇನೆ. ಕಡತವನ್ನು ಚಾಸಾ-23 ರವರಿಗೆ ನೀಡಿರುತ್ತೇನೆ.

ಈಗ ನಾನು ನೋಡಿದ ನಿಪಿ-1 ದೂರಿನಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಈಗ ನಾನು ನೋಡಿದ ದಾಖಲೆ

ಪ್ರ ವ ವರದಿಯಾಗಿದ್ದು ಅದರಲ್ಲಿ ನನ್ನ ಸಹಿ ಇದ್ದು ಅದನ್ನು ನೋಡಿ ಗುರುತಿಸಿದ್ದೇನೆ. ಷದ್ರಿ ದಾಖಲೆಯನ್ನು ನಿಪಿ-14 ಎಂದು, ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು</u> : ಆರೋಪಿ ಪರ : ಶ್ರೀ ಎಸ್ ಕೆ ಎಸ್ ವಕೀಲರಿಂದ ಃ

ನಿಪಿ-1 ದೂರು ನನ್ನ ಕೈ ಬರಹದಲ್ಲಿ ಇದೆ ಎಂದರೆ ಸರಿಯಲ್ಲ. ಲಿಖಿತವಾದ ಅರ್ಜಿಯನ್ನು ನಾನು ಸ್ವೀಕರಿಸಿಕೊಂಡಿರುತ್ತೇನೆ. ಘಟನಾ ಸ್ಥಳ ನಮ್ಮ ಠಾಣೆಯಿಂದ 10 ಕಿ ಮೀ ದೂರ ಇದೆ ಎಂದರೆ ಸರಿ. ನಿಪಿ-1 ದೂರಿನಲ್ಲಿ ಸಮಯವನ್ನು ತಿದ್ದುಪಡಿ ಮಾಡಿಲಾಗಿದೆ ಎಂದರೆ ಸರಿಯಲ್ಲ. ಮೊದಲೇ ತಯಾರಿಸಿದ ನಿಪಿ-1 ರಲ್ಲಿ ಖಾಲಿ ಜಾಗವನ್ನು ಬಿಟ್ಟು ನೀಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರು ಆರೋಪಿಯ ಹೆಸರನ್ನು ಹೇಳಿರುವುದಿಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ